# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: 080–26701303

## ೨೬.೦೯.೨೦೧೨ರಂದು ನಡೆದ ಪ್ರಶಾಸನ ಸಮಿತಿ ೭ನೇ ವಿಶೇಷ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೭ನೇ ವಿಶೇಷ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ ೨೬, ೨೦೧೨ರ ಬುಧವಾರ ಬೆಳಿಗ್ಗೆ ೧೧.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಬಿ.ಎಸ್. ಜಾಪಾಲಿ,** ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೮. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |
| ೯. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಸರ್ಕಾರದ ಕಾರ್ಯದರ್ಶಿಗಳು,** ಕಂದಾಯ ಇಲಾಖೆ, (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೩. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೪. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಆರನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದ್ದು, ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ಸಮಿತಿಯನ್ನು ಕರೆದು ಮುಂದಿನ ಕ್ರಮಗಳನ್ನು ಯೋಜಿಸಲು ಅನುವು ಮಾಡಿಕೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಕಳುಹಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 7**ಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಸ್ತಾವನೆಯೊಡನೆ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. **ವಿಷಯ ಸಂಖ್ಯೆ 8**ಕ್ಕೆ ಸಂಬಂಧಿಸಿದಂತೆ ವಿವಿಧ ಕಾಲೇಜುಗಳಲ್ಲಿ ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿದೆ. **ವಿಷಯ ಸಂಖ್ಯೆ 11**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ. **ವಿಷಯ ಸಂಖ್ಯೆ 12**ಕ್ಕೆ ಸಂಬಂಧಿಸಿದಂತೆ ಪದೋನ್ನತಿ ಬಡ್ತಿ ನೀಡಿ ಆದೇಶಿಸಲಾಗಿದೆ. **ವಿಷಯ ಸಂಖ್ಯೆ 13**ಕ್ಕೆ ಸಂಬಂಧಿಸಿದಂತೆ ಸೂಕ್ತ ಪ್ರಸ್ತಾವನೆಯೊಂದಿಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. **ವಿಷಯ ಸಂಖ್ಯೆ 14**ಕ್ಕೆ ಸಂಬಂಧಿಸಿದಂತೆ ಅರ್ಜಿಗೆ ರೂ. 10/–ರಂತೆ ಪರಿಶೀಲನಾ ವೆಚ್ಚವನ್ನು ಪಾವತಿಸಲಾಗಿದೆ. **ವಿಷಯ ಸಂಖ್ಯೆ 15**ಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶದಲ್ಲಿ ಅನುದಾನಿತ ಸಂಸ್ಕೃತ ಪಾಠಶಾಲೆಗಳ ಸ್ಪಷ್ಟ ಉಲ್ಲೇಖ ಇಲ್ಲದಿರುವ ಕಾರಣದಿಂದ ವಿಶೇಷ ಭತ್ಯೆಯನ್ನು ಪಾವತಿಸಿರುವುದಿಲ್ಲ. ಈ ಸಂಬಂಧವಾಗಿ ಸರ್ಕಾರಕ್ಕೆ ಸ್ಪಷ್ಟನೆ ಕೋರಿ ಪತ್ರ ಬರೆಯಲಾಗಿದೆ. **ವಿಷಯ**

**ಸಂಖ್ಯೆ 16**ಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ 10ರಂದು ಘಟಿಕೋತ್ಸವವನ್ನು ನಡೆಸಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳಲ್ಲಿ ವಿಷಯ ಸಂಖ್ಯೆ 1**ಕ್ಕೆ ಸಂಬಂಧಿಸಿದಂತೆ 'ಕಟ್ಟಡ ಸಲಹಾ ಸಮಿತಿ' ಸಭೆಯನ್ನು ಮೈಸೂರಿನಲ್ಲಿ ಕರೆಯಲು ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ಗೌರವ ಸಂದರ್ಶಕ ಪ್ರಾಧ್ಯಾಪಕರನ್ನು ಒಂದು ವರ್ಷದ ಅವಧಿಗೆ ನೇಮಿಸಿಕೊಂಡು ಆದೇಶವನ್ನು ಹೊರಡಿಸಲಾಗಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ಸಂಶೋಧನ ಕೇಂದ್ರವೆಂದು ಮಾನ್ಯತೆಯನ್ನು ನೀಡಿ ಆದೇಶ ಹೊರಡಿಸಲಾಗಿದೆ. **ವಿಷಯ ಸಂಖ್ಯೆ 7**ಕ್ಕೆ ಸಂಬಂಧಿಸಿದಂತೆ ಯೋಜನೆಯ ಸಂಬಂಧವಾಗಿ ಪತ್ರವನ್ನು ಬರೆಯಲಾಗಿದೆ. **ವಿಷಯ ಸಂಖ್ಯೆ 8**ಕ್ಕೆ ಸಂಬಂಧಿಸಿದಂತೆ ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ನಡೆಸಲಾಗಿದೆ.

ನಿರ್ಣಯ: **ಅನುಪಾಲನಾ ವರದಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

## ವಿಷಯ 2: 'ಪ್ರೊ. ಎಂ. ಹಿರಿಯಣ್ಣ ಗ್ರಂಥಪುರಸ್ಕಾರ–2011'ಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.

ಟಿಪ್ಪಣಿ: 'ಪ್ರೊ. ಎಂ. ಹಿರಿಯಣ್ಣ ಗ್ರಂಥಪುರಸ್ಕಾರ–2011'ಕ್ಕೆ ಗ್ರಂಥಗಳನ್ನು ಆಯ್ಕೆ ಮಾಡುವ ಸಲುವಾಗಿ ದಿನಾಂಕ: 12.09.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಈ ಕೆಳಕಂಡ ಏಳು ಗ್ರಂಥಗಳನ್ನು ಆಯ್ಕೆ ಮಾಡಲಾಗಿದೆ.

| ಪ್ರಕಾರ | ಗ್ರಂಥದ ಹೆಸರು | ಲೇಖಕರು/ಸಂಪಾದಕರು |
|---|---|---|
| ವಿಮರ್ಶಾ ಸಾಹಿತ್ಯ | **ಸಾಹಿತ್ಯವಲ್ಲರೀ** | ಡಾ. ಎನ್. ಲಕ್ಷ್ಮೀನಾರಾಯಣ ಭಟ್ಟ |
| ಅನುವಾದ ಸಾಹಿತ್ಯ (ಶಾಸ್ತ್ರಾನುವಾದ) | **ಶ್ರೀಬ್ರಹ್ಮಸೂತ್ರಭಾಷ್ಯ** | ವಿದ್ವಾನ್ ಎ. ಹರಿದಾಸ ಭಟ್ಟ |
| ಕಾವ್ಯ ಸಾಹಿತ್ಯ | **ದೇವೀ–ದಾನವೀಯಮ್** | ಡಾ. ಆರ್. ಶಂಕರ್ |
| ಕಥಾ ಸಾಹಿತ್ಯ | **ಅನುಬಂಧಃ** | ವಿದ್ವಾನ್ ಜನಾರ್ದನ ಹೆಗಡೆ |
| ನಾಟಕ ಸಾಹಿತ್ಯ | **ಪ್ರಮದ್ವರಾವರಣಮ್ ತಥಾ ಜಯವೈಜಯಂತೀ** | ವಿದ್ವಾನ್ ವೆಂಕಟೇಶ ಕುಲಕರ್ಣಿ |
| ಗ್ರಂಥ ಸಂಪಾದನೆ | **ಮಹಾಭಾರತತಾತ್ಪರ್ಯನಿರ್ಣಯ** | ಡಾ. ಬನ್ನಂಜೆ ಗೋವಿಂದಾಚಾರ್ಯ |
| ಶಾಸ್ತ್ರಸಾಹಿತ್ಯ | **ಪಂಚಲಕ್ಷಣೀಸರ್ವಸ್ವಮ್** | ಡಾ. ವೀರನಾರಾಯಣ ಪಾಂಡುರಂಗಿ |

'ಪ್ರೊ. ಎಂ. ಹಿರಿಯಣ್ಣ ಗ್ರಂಥಪುರಸ್ಕಾರ–2011' ಪ್ರಧಾನ ಸಮಾರಂಭವನ್ನು ದಿನಾಂಕ: 26.09.2012ರಂದು ಸಂಜೆ 5.00 ಗಂಟೆಗೆ 'ಯವನಿಕಾ ಸಭಾಂಗಣ'ದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭದಲ್ಲಿ ಗ್ರಂಥಕರ್ತರಿಗೆ ರೂ. 10,000 ಮತ್ತು ಸ್ಮರಣಿಕೆಯೊಂದಿಗೆ ಸನ್ಮಾನಿಸಲಾಗುವುದು. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿ ತನ್ನ ಸಂತೋಷವನ್ನು ವ್ಯಕ್ತಪಡಿಸಿತು.**

## ವಿಷಯ 3: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೆ ಇಂಧನ ಭತ್ಯೆ ನೀಡುತ್ತಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.

ಟಿಪ್ಪಣಿ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ಕಛೇರಿ ಕೆಲಸಗಳ ಓಡಾಟಕ್ಕಾಗಿ ತಿಂಗಳಿಗೆ ರೂ.20000/–ಗಳ ಆಧಾರದ ಮೇಲೆ ಬಾಡಿಗೆ ಕಾರೊಂದನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿತ್ತು. ಪ್ರಸ್ತುತ ಬಾಡಿಗೆ ಕಾರಿನ ಕರಾರನ್ನು ರದ್ದುಗೊಳಿಸಲಾಗಿದ್ದು, ಹೊಸ ಕಾರೊಂದನ್ನು ಖರೀದಿಸಲು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದರಿಂದ ಸರ್ಕಾರವು ಅನುಮೋದನೆ ನೀಡುವವರೆಗೆ ಕಛೇರಿ ಕೆಲಸ ಕಾರ್ಯಗಳಿಗೆ ನಿರ್ದೇಶಕರು ತಮ್ಮ ಸ್ವಂತ ಕಾರನ್ನು ಬಳಸಲು ಮಾನ್ಯ ಕುಲಪತಿಗಳು ಸೂಚಿಸಿರುತ್ತಾರೆ. ಅವರ ವಾಹನಕ್ಕೆ ತಗಲುವ ಇಂಧನದ ವೆಚ್ಚವನ್ನು ನಿಯಮಾನುಸಾರ ರಸೀದಿಗಳನ್ನು ಪಡೆದು, ಲಾಗ್ ಪುಸ್ತಕದಲ್ಲಿ ನಮೂದಿಸಿಕೊಂಡು ಪಾವತಿಸಲಾಗುತ್ತಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಘಟನೋತ್ತರ ಅನುಮೋದನೆಯನ್ನು ನೀಡಿತು.**

## ವಿಷಯ 4: ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ಅನುಮೋದನೆಯ ಬಗೆಗೆ.

ಟಿಪ್ಪಣಿ: ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ ಒಟ್ಟು 25 ಅಂಕಗಳನ್ನು ಹಾಗೂ 'ಡಿ' ವರ್ಗದ ಹುದ್ದೆಗೆ 10 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ದಿನಾಂಕ: 21.09.2012ರಂದು ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಾದ **ಉಪ ಕುಲಸಚಿವರು, ಉಪ ನಿರ್ದೇಶಕರು, ಸಹಾಯಕ ಕುಲಸಚಿವರು** ಮತ್ತು **ಸಹಾಯಕ ನಿರ್ದೇಶಕ** ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ನಡೆಸಲಾಯಿತು. ಅಂತೆಯೇ, ದಿನಾಂಕ: 25.09.2012ರಂದು ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಾದ **ವಾಹನ ಚಾಲಕರು, ಟೆಲಿಫೋನ್ ಆಪರೇಟರ್, ವಿಶ್ರಾಂತಿಗೃಹ ಮೇಲ್ವಿಚಾರಕರು** ಮತ್ತು **ಅಡುಗೆ ಸಹಾಯಕ** ಹುದ್ದೆಗಳ ನೇಮಕಾತಿಗಾಗಿ ಸಂದರ್ಶನವನ್ನು ನಡೆಸಲಾಯಿತು. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳಿಗೆ ದಿನಾಂಕ: 21.09.2012** ಮತ್ತು **ದಿನಾಂಕ: 25.09.2012ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ** ಮತ್ತು **ಶೈಕ್ಷಣಿಕ**

**ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು. ಉಪ ನಿರ್ದೇಶಕ, ಸಹಾಯಕ ಕುಲಸಚಿವ, ಟೆಲಿಫೋನ್ ಆಪರೇಟರ್ ಮತ್ತು ವಿಶ್ರಾಂತಿಗೃಹ ಮೇಲ್ವಿಚಾರಕ –ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಶೈಕ್ಷಣಿಕ ಅರ್ಹತೆ, ಸೇವಾನುಭವ ಇಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆ ನಿರ್ಣಯಿಸಿತು.**

| **ಕ್ರ.ಸಂ.** | **ಹುದ್ದೆಯ ಪದನಾಮ** | **ಮೀಸಲಾತಿ** | **ಆಯ್ಕೆಗೊಂಡ ಅಭ್ಯರ್ಥಿಗಳು** |
|---|---|---|---|
| 01. | ಉಪಕುಲಸಚಿವರು | ಮೀಸಲುರಹಿತ ಹುದ್ದೆ | **ಶ್ರೀ ಪಾಗೋಜಿ ಪ್ರಕಾಶ ರುದ್ರಪ್ಪ**<br>ಮನೆ ನಂ. 44, 'ಗಂಗಾ ಕೃಪ', ವಿಕಾಸನಗರ<br>ಪೊಲೀಸ್ ಹೆಡ್‌ಕ್ವಾಟ್ರರ್ಸ್ ಹಿಂಭಾಗ<br>ಧಾರವಾಡ – 580008. |
| 02. | ಸಹಾಯಕ ನಿರ್ದೇಶಕ | ಪರಿಶಿಷ್ಟ ಜಾತಿ | **ಬಿ. ಗೋವಿಂದ**<br>ತಂದೆ: ಲೇಟ್ ಬಸವರಾಜ್<br>ಪುಷ್ಪಾಪುರ ಗ್ರಾಮ, ಶಾಗ್ಯ ಅಂಚೆ, ಹನೂರು ಹೋ,<br>ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ |
| 03. | ಅಡುಗೆ ಸಹಾಯಕ | ಮೀಸಲುರಹಿತ ಹುದ್ದೆ | **ಎಂ. ಮಂಗಳ**<br>ಬಿನ್ ಎಂ. ದೇವಣ್ಣ, ನಂ: 48, 16ನೇ ವಾರ್ಡ್<br>ಬಸವಣ್ಣ ಕಾಲುವೆ ಹತ್ತಿರ, ಹೊಸ ಅಮರಾವತಿ<br>ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ |
| 04. | ವಾಹನ ಚಾಲಕ | ಪರಿಶಿಷ್ಟ ಜಾತಿ | **ಎಚ್. ಶಿವಕುಮಾರ್**<br>ಬಿನ್ ಹಲಗಯ್ಯ<br>ನಂ. 200, ಕೆ.ಎಸ್.ಸಿ.ಬಿ. ಕಾಲೋನಿ, ಕಾವೇರಿನಗರ<br>ಲಗ್ಗೆರೆ ಹತ್ತಿರ, ಪೀಣ್ಯ 3ನೇ ಹಂತ<br>ಬೆಂಗಳೂರು–560058 |
| | | ಸಾಮಾನ್ಯ | **ದಿವಾಕರ್ ಕೆ.ಬಿ.**<br>ಬಿನ್ ಬೆಟ್ಟೇಗೌಡ<br>ನಂ. 422, ಶ್ರೀರಂಗ ನಿವಾಸ, 1ನೆ ಮುಖ್ಯರಸ್ತೆ<br>2ನೇ ಅಡ್ಡರಸ್ತೆ, ವಿನಾಯಕನಗರ, ನಾಗಸಂದ್ರ ಅಂಚೆ<br>ಬೆಂಗಳೂರು – 560073 |

**ಮೇಲ್ಕಂಡ ಆಯಾಯ ಹುದ್ದೆಗಳಿಗೆ ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗಡೆ ಕರ್ತವ್ಯಕ್ಕೆ ಹಾಜರಾಗಲು ಸಭೆ ಸೂಚಿಸಿತು.**

### ವಿಷಯ 5: ಶ್ರೀ ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ, ಕುವೆಂಪುನಗರ, ಮೈಸೂರು –ಈ ಶಾಲೆಯನ್ನು ವೇತನಾನುದಾನಕ್ಕೆ ಒಳಪಡಿಸಿರುವ ಬಗೆಗೆ.

ಟಿಪ್ಪಣಿ: ಸರ್ಕಾರಿ ಆದೇಶ ಸಂಖ್ಯೆ: ಇಡಿ 209 ಯುಆರ್‌ಸಿ 2011; ದಿನಾಂಕ: 11.09.2012ರಂದು ಶ್ರೀ ಆದಿಚುಂಚನಗಿರಿ ಸಂಸ್ಕೃತ ಪಾಠಶಾಲೆ, ಕುವೆಂಪುನಗರ, ಮೈಸೂರು –ಈ ಶಾಲೆಯನ್ನು ವೇತನಾನುದಾನಕ್ಕೆ ಒಳಪಡಿಸಿ ಮೂರು ಬೋಧಕ ಹುದ್ದೆಗಳನ್ನು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಅನುಮೋದಿಸಿ ಆದೇಶ ನೀಡಿರುವಂತೆ ನಿರ್ದೇಶನಾಲಯದಿಂದ ಚಲನಾದೇಶ(ಸಂಖ್ಯೆ: ಕಸಂವಿ/ಸಂಶಿನಿ/70/ಹಾ.ಸಂ.ಪಾ.ವೇ.ಅ/2012–13; ದಿನಾಂಕ: 13.09.2012)ವನ್ನು ಹೊರಡಿಸಲಾಗಿದೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಅನುಮೋದನೆಯನ್ನು ನೀಡಿತು.**

### ವಿಷಯ 6: ಶ್ರೀ ಶಿವಯೋಗೀಶ್ವರ ಸಂಸ್ಕೃತ ಪಾಠಶಾಲೆ, ಇಂಚಲ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ –ಈ ಶಾಲೆಯ ಸಾಹಿತ್ಯ ತರಗತಿಗಳನ್ನು ವೇತನಾನುದಾನಕ್ಕೆ ಒಳಪಡಿಸಿರುವ ಬಗೆಗೆ.

ಟಿಪ್ಪಣಿ: ಸರ್ಕಾರಿ ಆದೇಶ ಸಂಖ್ಯೆ: ಇಡಿ 96 ಯುಡಿವಿ 2011; ದಿನಾಂಕ: 09.04.2012ರಲ್ಲಿ ಶ್ರೀ ಶಿವಯೋಗೀಶ್ವರ ಸಂಸ್ಕೃತ ಪಾಠಶಾಲೆ, ಇಂಚಲ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ –ಇಲ್ಲಿನ ಸಾಹಿತ್ಯ ತರಗತಿಗಳನ್ನು ವೇತನಾನುದಾನಕ್ಕೆ ಒಳಪಡಿಸಿ ಸಹಶಿಕ್ಷಕರಾಗಿ ದಿನಾಂಕ: 21.06.2004ರಲ್ಲಿ ನೇಮಕಗೊಂಡಿರುವ ಶ್ರೀ ಪಿ.ಆರ್. ಹಿರೇಮಠ –ಇವರ ನೇಮಕಾತಿಯನ್ನು ವೇತನಸಹಿತವಾಗಿ ಅನುಮೋದಿಸಿ, ಇನ್ನುಳಿದ ಎರಡು ಹುದ್ದೆಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಂದ ತುಂಬುವ ಷರತ್ತಿಗೊಳಪಟ್ಟು ಆದೇಶಿಸಲಾಗಿದೆ. ಆದೇಶದಂತೆ ಶ್ರೀ ಪಿ.ಆರ್. ಹಿರೇಮಠ ಇವರ ನೇಮಕಾತಿಯನ್ನು ವೇತನಸಹಿತವಾಗಿ ಅನುಮೋದಿಸಿ ಹಾಗೂ ಎರಡು ಹುದ್ದೆಗಳನ್ನು ಆದೇಶದಲ್ಲಿನ ಷರತ್ತಿನಂತೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. (ಸಂಖ್ಯೆ: ಕಸಂವಿ/ಸಂಶಿನಿ/18/ನೇ.ಅ/2011–12; ದಿನಾಂಕ: 22.09.2012) ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 7: ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೆ 25 ಮತ್ತು 30 ವರ್ಷಗಳು ಅದೇ ಹುದ್ದೆಯಲ್ಲಿ ಮುಂದುವರೆದಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿರುವ ಬಗೆಗೆ.**

ಟಿಪ್ಪಣಿ: ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(VIII); ದಿನಾಂಕ: 14.06.2012ರಂದು ಈ ಆದೇಶದಲ್ಲಿ ಸರ್ಕಾರಿ ನೌಕರರಿಗೆ ಮೇಲ್ಕಂಡ ಸೌಲಭ್ಯವನ್ನು ಮಂಜೂರು ಮಾಡಿ ಆದೇಶಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಇಡಿ 100 ಎಸ್‌ಟಿಬಿ 2012; ದಿನಾಂಕ: 11.09.2012ರಲ್ಲಿ ರಾಜ್ಯ ಸರ್ಕಾರದ ವೇತನಾನುದಾನ ಪಡೆಯುವ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಈ ಸೌಲಭ್ಯವನ್ನು ವಿಸ್ತರಿಸಿ ಆದೇಶಿಸಲಾಗಿದೆ. ಸರ್ಕಾರಿ ಆದೇಶಗಳನ್ವಯ ಅನುದಾನಿತ ಸಂಸ್ಕೃತ ಪಾಠಶಾಲೆ/ಕಾಲೇಜುಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೂ ಈ ಸೌಲಭ್ಯವನ್ನು ಅನ್ವಯಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಲು ಅನುಮೋದನೆಯನ್ನು ನೀಡಿತು.**

**ವಿಷಯ 8: ಸಂಸ್ಕೃತ ಪಾಠಶಾಲೆ ಮತ್ತು ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿಯನ್ನು ನಿಗದಿಗೊಳಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 16.05.2012ರಂದು ನಡೆದ ಪ್ರಶಾಸನ ಸಮಿತಿ 4ನೇ ಸಭೆಯಲ್ಲಿ ನಡಾವಳಿಯ ದಿನಾಂಕಕ್ಕೆ ಪೂರ್ವದಲ್ಲಿ ಮಾಹಿತಿ ಸಲ್ಲಿಸಿದ ತರಬೇತಿ ಹೊಂದಿರುವ ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿ ನಿಗದಿಗೊಳಿಸಲು ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಪೂರ್ವೋಕ್ತ ಅನುದಾನ ಸಂಹಿತೆಗೆ ಅನುಗುಣವಾಗಿ ತರಬೇತಿ ವೇತನ ನೀಡಲು ಸಭೆಯು ಅನುಮೋದನೆ ನೀಡಿರುವಂತೆ ಸಂಬಂಧಿಸಿದ ಶಿಕ್ಷಕರಿಗೆ ತರಬೇತಿ ವೇತನಶ್ರೇಣಿ ನಿಗದಿಗೊಳಿಸಿ ಆದೇಶ ನೀಡಲಾಗಿದೆ. ಅದರಂತೆ, ತರಬೇತಿ ಪಡೆದ ಶಿಕ್ಷಕರು ಸಲ್ಲಿಸಿರುವ ಮಾಹಿತಿಗಳನ್ನು ಪರಿಶೀಲಿಸಿ ಅವರಿಗೂ ತರಬೇತಿ ವೇತನಶ್ರೇಣಿ ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಹಣಕಾಸು ಸಮಿತಿ ಮುಂದೆ ಮಂಡಿಸಿ, ಅನಂತರ ಪ್ರಶಾಸನ ಸಮಿತಿಯಲ್ಲಿ ಶಿಕ್ಷಕರಿಗೆ ತರಬೇತಿ ವೇತನ ಮತ್ತು ವೇತನಶ್ರೇಣಿಯನ್ನು ನಿಗದಿಗೊಳಿಸುವ ಬಗೆಗೆ ಕ್ರಮವಹಿಸಬಹುದೆಂದು ಸಭೆಯು ಸೂಚಿಸಿತು.**

**ವಿಷಯ 9: ರಾಜ್ಯದಲ್ಲಿನ ಸಂಸ್ಕೃತ ಕಾಲೇಜುಗಳಲ್ಲಿ ಸಂಯುಕ್ತಗೊಂಡ ಸಂಸ್ಕೃತ ಪಾಠಶಾಲೆಗಳ ಪ್ರತ್ಯೇಕ ಕಾರ್ಯನಿರ್ವಹಣೆಯ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನಲ್ಲಿ ರಾಜ್ಯದ ನಾಲ್ಕು ವಲಯಗಳ ಸಂಸ್ಕೃತ ಪಾಠಶಾಲೆಗಳ ಮುಖ್ಯೋಪಾಧ್ಯಾಯರ ಹಾಗೂ ಆಡಳಿತ ಮಂಡಳಿಗಳ ಕಾರ್ಯದರ್ಶಿಗಳು/ಅಧ್ಯಕ್ಷರ ಸಭೆಯಲ್ಲಿ ತೀರ್ಮಾನಿಸಿದಂತೆ ಸಂಸ್ಕೃತ ಕಾಲೇಜುಗಳಲ್ಲಿ ಪ್ರಥಮಾ ತರಗತಿಯಿಂದ ಸಾಹಿತ್ಯದ ತರಗತಿಗಳವರೆಗೂ ಬೋಧನೆ ನಡೆಯುತ್ತಿದ್ದು, ಸಂಸ್ಕೃತ ಪಾಠಶಾಲೆಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ಕಾಲೇಜುಗಳಿಂದ ಪ್ರತ್ಯೇಕಪಡಿಸಬೇಕಾದ ಅವಶ್ಯಕತೆ ಇರುತ್ತದೆ. ಈ ಕುರಿತು ಕೆಲ ಕಾಲೇಜುಗಳ ಪ್ರಾಚಾರ್ಯರುಗಳು ಒಪ್ಪಿಗೆ ಪತ್ರಗಳನ್ನು ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಕಾಲೇಜುಗಳ ಪಾಠಶಾಲೆಗಳಿಗೆ 2012–13ನೇ ಸಾಲಿನಿಂದ ಪ್ರತ್ಯೇಕವಾಗಿ ಮಾನ್ಯತೆಯನ್ನು ನೀಡಬೇಕಾಗಿದೆ. ಈ ಎಲ್ಲಾ ಅಂಶಗಳನ್ನು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 10: ಹೊಸದಾಗಿ ಪ್ರಾರಂಭಿಸುವ ಸಂಸ್ಕೃತ ಪಾಠಶಾಲೆಗಳ ಸ್ಥಿರನಿಧಿ ಠೇವಣಿ ಹಣವನ್ನು 2000 ರೂ.ಗಳಿಂದ 5000 ರೂ.ಗಳಿಗೆ ಹೆಚ್ಚಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸರ್ಕಾರವು ಈ ಹಿಂದೆ ಸಂಸ್ಕೃತ ಪಾಠಶಾಲೆಗಳನ್ನು ಹೊಸದಾಗಿ ತೆರೆಯಲು ಅನುಮತಿ ನೀಡುವ ಮುನ್ನ ರೂ. 2000–00 ಗಳನ್ನು ಕರ್ನಾಟಕ ಸರ್ಕಾರದ ಸಂಸ್ಕೃತ ಪಾಠಶಾಲೆಗಳ ಅನುದಾನಸಂಹಿತೆಯ ನಿಯಮದಂತೆ ಪಾಠಶಾಲೆಗಳ ಆಡಳಿತ ಮಂಡಳಿಗಳ ಹೆಸರಿನಲ್ಲಿ ಸ್ಥಿರನಿಧಿ ಠೇವಣಿಯನ್ನಾಗಿ ಇಡಲು ಸೂಚಿಸಿ, ಆನಂತರದಲ್ಲಿ ಮಾನ್ಯತೆಯನ್ನು ನೀಡುತ್ತಿತ್ತು. ಪ್ರಸಕ್ತ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಹೊಸದಾಗಿ ಪ್ರಾರಂಭಿಸುವ ಸಂಸ್ಕೃತ ಪಾಠಶಾಲೆಗಳಿಗೆ ಅನುಮತಿ ನೀಡಿ, ಆನಂತರ ಮಾನ್ಯತೆಯನ್ನು ನೀಡುತ್ತಿದ್ದು, ಈ ಸಂಬಂಧ ನೂತನವಾಗಿ ಪ್ರಾರಂಭಿಸಲಾಗುವ ಸಂಸ್ಕೃತ ಪಾಠಶಾಲೆಗಳ ಹೆಸರಿನಲ್ಲಿ ರೂ. 5000–00 ಗಳನ್ನು ಸ್ಥಿರನಿಧಿ ಠೇವಣಿಯನ್ನಾಗಿ ಇಡಲು ಸೂಚಿಸಿದೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ಒಪ್ಪಿಗೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು